# ದೊಡ್ಡ ಡಯಲ್ ವಾಚ್

ದೊಡ್ಡ ಡಯಲ್ ವಾಚ್ ಯುವಜನರ ಮೆಚ್ಚಿನ ಆಯ್ಕೆ ಆಗಿದೆ. ಹುಡುಗಿಯರು ತಮ್ಮ ನೋಟಕ್ಕೆ ಪೂರಕವಾಗಿರುವ ಟ್ರೆಂಡಿ ಮತ್ತು ಸೊಗಸಾದ ಕೈಗಡಿಯಾರಗಳನ್ನು ಇಷ್ಟಪಡುತ್ತಾರೆ. ಮಾರುಕಟ್ಟೆಯಲ್ಲಿ ಲಭ್ಯವಿರುವ ಹಲವು ಆಯ್ಕೆಗಳೊಂದಿಗೆ, ಪರಿಪೂರ್ಣವಾದ ಫ್ಯಾಷನ್ ಮತ್ತು ಕ್ರಿಯಾತ್ಮಕ ಗಡಿಯಾರವನ್ನು ಆಯ್ಕೆ ಮಾಡಲು ಹುಡುಗಿಯರು ಮುಂದು.

ಬೆಳ್ಳಿ ಮತ್ತು ಚಿನ್ನದ ಡಯಲ್ ಮತ್ತು ನಯವಾದ ಅನಲಾಗ್ ಕಾರ್ಯದೊಂದಿಗಿನ ‘ಮಿನುಗು’ ಗಡಿಯಾರ ಇದೀಗ ಟ್ರೆಂಡಿಯಾಗಿದೆ.



ಹೆಣ್ಣು ಮಕ್ಕಳೂ ಧರಿಸುತ್ತಿದ್ದಾರೆ. ಮಿಕ್ಕಿ ಮೌಸ್, ಸ್ಪೈಡರ್ ಮ್ಯಾನ್, ಡೋರೆಮಾನ್, ಸಿಂಚನ್, ಸಿಂಡ್ರೆಲಾ... ಇನ್ನಿತರ ಪಾತ್ರವನ್ನು ಹೋಲುವಂತಹ ಡಯಲ್‌ಗಳಿಂದ ತಯಾರಾದ ವಾಚ್‌ಗಳು ದೊರೆಯುತ್ತಿವೆ.

ಇವುಗಳ ಜೊತೆಗೆ ಇದೀಗ ಮಹಿಳೆಯರ ಅಭಿರುಚಿಗೆ ಅನುಗುಣವಾಗಿ ವೈವಿಧ್ಯಮಯ ವಾಚ್‌ಗಳು ಸಿಗುತ್ತಿವೆ. ಇವುಗಳ ಡಯಲ್‌ಗಳು ವೃತ್ತಾಕಾರ, ಚೌಕ, ತ್ರಿಭುಜ, ಅಂಡಾಕಾರ ಇನ್ನಿತರ ಆಕೃತಿಗಳಲ್ಲಿ ದೊರೆಯುತ್ತವೆ. ಡಯಲ್‌ನ ಸುತ್ತ ಹರಳುಗಳು, ಜೆಮ್ ಹಾಗೂ ಇತರೆ ವಸ್ತುಗಳಿಂದ ಅಲಂಕರಿಸಲಾಗಿರುತ್ತದೆ. ಇಂತಹ ವಾಚುಗಳು ನೋಡಲು ಸುಂದರವಾಗಿಯೂ, ಧರಿಸಿದರೆ ರಿಚ್ ಲುಕ್ ನೀಡುತ್ತದೆ.

ವಾಚ್‌ಗಳನ್ನು ಕೈಗೆ ಕಟ್ಟಿಕೊಳ್ಳಲು ಬೋರ್ ಎನಿಸುವವರಿಗೆ ಫಿಂಗರ್ ರಿಂಗ್ ವಾಚುಗಳು ಮಾರುಕಟ್ಟೆಗೆ ಲಗ್ಗೆ ಇಟ್ಟಿವೆ. ಇವು ಗಾತ್ರದಲ್ಲಿ ಚಿಕ್ಕದಿದ್ದರೂ ಸಮಯವನ್ನು ಸುಲಭವಾಗಿ ವೀಕ್ಷಿಸಬಹುದು. ರಿಂಗಿನ ಮಾದರಿಯಲ್ಲಿರುವ ಈ ಬಗೆಯ ವಾಚುಗಳು ಚಿಕ್ಕದಾದ ಡಯಲ್‌ಗಳನ್ನು ಹೊಂದಿವೆ. ಇನ್ನುಳಿದಂತೆ ವಾಚಿನ ಡಯಲ್‌ಗಳಿಗೆ ಚಿಕ್ಕ ಚಿಕ್ಕ ಹರಳುಗಳಿಂದ ಅಲಂಕಾರ ಮಾಡಲಾಗಿದ್ದು, ಇವುಗಳು ಎಲ್ಲ ಬಗೆಯ ಉಡುಗೆಗಳಿಗೆ ಬಹಳ ಚೆನ್ನಾಗಿ ಒಪ್ಪುತ್ತವೆ. ಇವುಗಳಲ್ಲಿ ಗೋಲ್ಡ್, ವೈಟ್ ಮೆಟಲ್ ಮತ್ತು ಡೆಕೊರೆಟಿವ್ ಡಯಲ್‌ಗಳಿರುವ ವಾಚ್‌ಗಳು ಲಭ್ಯವಿವೆ. ಈ ರಿಂಗ್‌ಗಳು ಬೇರೆ ಬೇರೆ ಗಾತ್ರಗಳಲ್ಲಿ ಸಿಗುವುದರಿಂದ ಹೆಬ್ಬೆಟ್ಟಿನಿಂದ ಹಿಡಿದು ಕಿರುಬೆರಳಿನವರೆಗೆ ಎಲ್ಲಿಯಾದರೂ ಧರಿಸಬಹುದು.

ಬ್ರೇಸ್ಲೆಟ್ ಮಾದರಿಯ ವಾಚ್‌ಗಳು ಇದೀಗ ಯುವತಿಯರ ಮನಗೆದ್ದಿದೆ. ಇದು ಎಲ್ಲ ಬಗೆಯ ಡ್ರೆಸ್‌ಗಳಿಗೆ ಮ್ಯಾಚ್ ಆಗುವಂತಿದೆ. ಇದು ಗ್ರ್ಯಾಂಡ್ ಲುಕ್ ನೀಡುವುದರಿಂದ ಇವುಗಳನ್ನು ಯಾವುದಾದರೂ ಸಭೆ, ಸಮಾರಂಭ, ಕಾಲೇಜು ಎಥ್ನಿಕ್ ಡೇ ಮುಂತಾದವುಗಳಲ್ಲಿ ಧರಿಸಬಹುದು. ಹಾಗೇ ಫಿಂಗರ್ ರಿಂಗ್ ವಾಚು ಮತ್ತು ಕೈಗಡಿಯಾರ ಎರಡೂ ಬೇಡವೆನ್ನುವವರಿಗಾಗಿ ಪೆಂಡೆಂಟ್ ವಾಚುಗಳು ಮಾರುಕಟ್ಟೆಯಲ್ಲಿ ದೊರೆಯುತ್ತಿವೆ. ಕುತ್ತಿಗೆಗೆ ಧರಿಸುವ ಲಾಂಗ್ ಚೈನಿನ ಪೆಂಡೆಂಟ್ ವಾಚಿನ ಡಯಲ್‌ಗಿರುತ್ತದೆ. ಇವುಗಳಲ್ಲಿಯೂ ಹಲವು ಡಿಸೈನುಗಳನ್ನು ಕಾಣಬಹುದು. ಇದನ್ನು ಹೆಚ್ಚಾಗಿ ವಯಸ್ಸಾದ ಮಹಿಳೆಯರು ಧರಿಸುತ್ತಿದ್ದಾರೆ. ಅವರಿಗೆ ಕೈಗೆ ವಾಚ್ ಧರಿಸುವುದಕ್ಕಿಂತ ಕತ್ತಿನಲ್ಲಿ ಪೆಂಡೆಂಟ್ ರೂಪದಲ್ಲಿ ವಾಚ್ ಧರಿಸಿ ಸಮಯ ವೀಕ್ಷಿಸುವುದು ಅತ್ಯಂತ ಸುಲಭದ ಕೆಲಸ.

ಒಟ್ಟಿನಲ್ಲಿ ವಾಚ್‌ಗಳು ಅಲಂಕಾರಕ್ಕೆ, ಅಂದಕ್ಕೆ, ಫ್ಯಾಷನ್‌ಗೆ ಹಾಗೂ ಸಮಯ ವೀಕ್ಷಣೆಯ ಸಾಧನವಾಗಿ ಎಲ್ಲರ ಗಮನಸೆಳೆಯುತ್ತಿದೆ. ■



# ಕೂಲ್‌ಕೂಲ್ ಸನ್‌ಗ್ಲಾಸ್

ಬಿಸಿಲಿನ ಝಳದಿಂದ ಕಣ್ಣುಗಳ ರಕ್ಷಣೆಯೂ ಆಗಬೇಕು, ಸ್ಟೈಲಿಷ್ ಆಗಿಯೂ ಕಾಣಬೇಕು, ಇದಕ್ಕಾಗಿಯೇ ಬೇಕು ಫ್ಯಾಷನಬಲ್ ಕೂಲಿಂಗ್ ಗ್ಲಾಸ್, ಅರ್ಥಾತ್ ತಂಪು ಕನ್ನಡಕ.

ಬಿರು ಬಿಸಿಲಿಗೆ ಹೊರಗೆ ಹೋಗುವಾಗ ಕೂಲಿಂಗ್ ಗ್ಲಾಸ್ ಧರಿಸಲೇಬೇಕಾಗುತ್ತದೆ. ಕಣ್ಣುಗಳ ಆರೋಗ್ಯ ಕಾಪಾಡಿಕೊಳ್ಳಬೇಕಾದರೆ ಉತ್ತಮ ಗುಣಮಟ್ಟದ ಕೂಲಿಂಗ್ ಗ್ಲಾಸ್ ಅನ್ನು ಬಳಸಬೇಕು. ಇದು ದೀರ್ಘ ಬಾಳಿಕೆ ಬರುತ್ತದೆ. ಕಣ್ಣುಗಳು ತಂಪಾಗಿರುತ್ತವೆ. ಸೂರ್ಯನ ಅತಿನೇರಳೆ ಕಿರಣಗಳಿಂದ (ಅಲ್ಟ್ರಾ ವಯೊಲೆಟ್ ರೇಸ್) ಕಣ್ಣಿಗೆ ಉಂಟಾಗುವ ಹಾನಿಯನ್ನು ತಪ್ಪಿಸಲು, ಸ್ಪಷ್ಟವಾದ ನೋಟ ಪಡೆಯಲು ಸನ್‌ಗ್ಲಾಸ್ ಬಳಸಬೇಕು. ಕಪ್ಪು ಬಣ್ಣದ ಗ್ಲಾಸ್ ಕಣ್ಣುಗಳಿಗೆ ರಕ್ಷಣೆ ನೀಡುತ್ತದೆ. ನೀಲಿ, ಕೆಂಪು, ಕಂದು ಬಣ್ಣದ ಸನ್‌ಗ್ಲಾಸ್‌ಗಳು ಕೂಡ ಬಿಸಿಲುಕಾಲಕ್ಕೆ ಸೂಕ್ತವಾದವೇ.

- ಆದಷ್ಟು ಹಗುರವಾದ ಫ್ರೇಮ್ ಇರುವ ಸನ್‌ಗ್ಲಾಸ್ ಬಳಸಿ.
- ಸನ್‌ಟ್ಯಾನ್, ಕಣ್ಣುಗಳ ಸುತ್ತ ಕಪ್ಪು ವರ್ತುಲ ಬರುವುದನ್ನು ತಪ್ಪಿಸಲು ಸನ್‌ಗ್ಲಾಸ್ ಸಹಕಾರಿ.
- ಆದಷ್ಟು ಬ್ರ್ಯಾಂಡೆಡ್ ಅಥವಾ ಉತ್ತಮ ಕಂಪನಿಯ ಸನ್‌ಗ್ಲಾಸ್ ಅನ್ನೇ ಬಳಸಿ. ಕಳಪೆ ಮಟ್ಟದ ಗ್ಲಾಸ್‌ನಿಂದ ಕಣ್ಣಿಗೆ ಹಾನಿಯಾಗಬಹುದು.
- ಬಿಸಿಲಲ್ಲಿ ಆಡುವಾಗ, ಬೈಕ್ ಓಡಿಸುವಾಗ, ನಡೆಯುವಾಗ ಸನ್‌ಗ್ಲಾಸ್ ಹಾಕಿಕೊಂಡು ಬಿಸಿಲಿನ ಆಘಾತದಿಂದ ಕಣ್ಣುಗಳನ್ನು ರಕ್ಷಿಸಿಕೊಳ್ಳಿ.
- ಮಹಿಳೆಯರು ಕೂಡ ಸ್ಟೈಲಿಷ್ ಸನ್‌ಗ್ಲಾಸ್ ಬಳಸಿದರೆ ಬಿಸಿಲು ಕಾಲದಲ್ಲಿ ಕಣ್ಣುಗಳ ಉರಿ, ದೂಳು, ಅಲರ್ಜಿ ಆಗುವುದನ್ನು ತಪ್ಪಿಸಬಹುದು.